prepp

Practice, Learn and Achieve Your Goal with Prepp

# UGC NET Exam

Kannada

Simplifying
**Government Exams**

SSC CHSL | IAS EXAM | RRB NTPC | NTSE | CDS

SSC CGL | CBSE UGC NET | IBPS PO | NDA

SBI PO | IBPS CLERK | AFCAT | SSC JE | CTET

CSIR UGC NET | CAPF | IBPS RRB

www.prepp.in

# PAPER-II
# KANNADA

**Signature and Name of Invigilator**

1. (Signature) ____________________________
   (Name) ____________________________
2. (Signature) ____________________________
   (Name) ____________________________

OMR Sheet No. : ..............................................
(To be filled by the Candidate)

Roll No. | | | | | | | | |
(In figures as per admission card)

Roll No. ____________________________________
(In words)

**J 2 1 1 1**

Time : 1 $^1/_4$ hours] [Maximum Marks : **100**

Number of Pages in this Booklet : **12** | Number of Questions in this Booklet : **50**

## Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
   (iii) After this verification is over, the OMR Sheet Number should be entered on this Test Booklet.
4. Each item has four alternative responses marked (A), (B), (C) and (D). You have to darken the oval as indicated below on the correct response against each item.
   **Example :** (A) (B) ● (D)
   where (C) is the correct response.
5. Your responses to the items are to be indicated in the **Answer Sheet given inside the Paper I Booklet only.** If you mark at any place other than in the ovals in the Answer Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your Name, Roll Number, Phone Number or put any mark on any part of the Answer Sheet, except for the space allotted for the relevant entries, which may disclose your identity, or use abusive language or employ any other unfair means, you will render yourself liable to disqualification.
9. You have to return the test question booklet and OMR Answer sheet to the invigilators at the end of the examination compulsorily and must not carry it with you outside the Examination Hall.
10. **Use only Blue/Black Ball point pen.**
11. **Use of any calculator or log table etc., is prohibited.**
12. **There is no negative marks for incorrect answers.**

## परीक्षार्थियों के लिए निर्देश

1. पहले पृष्ठ के ऊपर नियत स्थान पर अपना रोल नम्बर लिखिए ।
2. इस प्रश्न-पत्र में पचास बहुविकल्पीय प्रश्न हैं ।
3. परीक्षा प्रारम्भ होने पर, प्रश्न-पुस्तिका आपको दे दी जायेगी । पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे, जिसकी जाँच आपको अवश्य करनी है :
   (i) प्रश्न-पुस्तिका खोलने के लिए उसके कवर पेज पर लगी कागज की सील को फाड़ लें । खुली हुई या बिना स्टीकर-सील की पुस्तिका स्वीकार न करें ।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं । दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात् किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें । इसके लिए आपको पाँच मिनट दिये जायेंगे । उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा ।**
   (iii) इस जाँच के बाद OMR पत्रक की क्रम संख्या इस प्रश्न-पुस्तिका पर अंकित कर दें ।
4. प्रत्येक प्रश्न के लिए चार उत्तर विकल्प (A), (B), (C) तथा (D) दिये गये हैं । आपको सही उत्तर के दीर्घवृत्त को पेन से भरकर काला करना है जैसा कि नीचे दिखाया गया है ।
   **उदाहरण :** (A) (B) ● (D)
   जबकि (C) सही उत्तर है ।
5. प्रश्नों के उत्तर **केवल प्रश्न पत्र I के अन्दर दिये गये उत्तर-पत्रक पर ही** अंकित करने हैं । यदि आप उत्तर पत्रक पर दिये गये दीर्घवृत्त के अलावा किसी अन्य स्थान पर उत्तर चिह्नांकित करते हैं, तो उसका मूल्यांकन नहीं होगा ।
6. अन्दर दिये गये निर्देशों को ध्यानपूर्वक पढ़ें ।
7. कच्चा काम (Rough Work) इस पुस्तिका के अन्तिम पृष्ठ पर करें ।
8. यदि आप उत्तर-पुस्तिका पर नियत स्थान के अलावा अपना नाम, रोल नम्बर, फोन नम्बर या कोई भी ऐसा चिह्न जिससे आपकी पहचान हो सके, अंकित करते हैं अथवा अभद्र भाषा का प्रयोग करते हैं, या कोई अन्य अनुचित साधन का प्रयोग करते हैं, तो परीक्षा के लिये अयोग्य घोषित किये जा सकते हैं ।
9. आपको परीक्षा समाप्त होने पर प्रश्न-पुस्तिका एवं OMR उत्तर-पत्रक निरीक्षक महोदय को लौटाना आवश्यक है और परीक्षा समाप्ति के बाद उसे अपने साथ परीक्षा भवन से बाहर न लेकर जायें ।
10. **केवल नीले/काले बाल प्वाईंट पेन का ही इस्तेमाल करें ।**
11. **किसी भी प्रकार का संगणक (कैलकुलेटर) या लाग टेबल आदि का प्रयोग वर्जित है ।**
12. **गलत उत्तरों के लिए कोई अंक काटे नहीं जाएँगे ।**



Latest Sarkari Jobs, Govt Exam Results, Vacancies and updates on one click
Know More

# KANNADA
## Paper-II

**Note :** This paper contains **fifty (50)** objective type questions, each question carrying **two (2)** marks. Attempt all the questions.

**ಸೂಚನೆ :** ಈ ಪತ್ರಿಕೆಯಲ್ಲಿ ಬಹು ಆಯ್ಕೆಯ **ಐವತ್ತು (50)** ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ **ಎರಡು (2)** ಅಂಕಗಳು ಇರುತ್ತವೆ. ಎಲ್ಲ ಪ್ರಶ್ನೆಗಳನ್ನೂ ಉತ್ತರಿಸಿರಿ.

**ಏಕ ಆಯ್ಕೆಯ ಮಾದರಿಯ ಪ್ರಶ್ನೆಗಳು :**

**1.** ಶ್ರವಣಬೆಳಗೊಳದ ಗೊಮ್ಮಟ ಸ್ತುತಿಯನ್ನು ಬರೆದ ಕವಿ

(A) ರನ್ನ

(B) ಪೊನ್ನ

(C) ಬೊಪ್ಪಣ

(D) ನಾಗವರ್ಮ

**2.** ಇದು ಚಂಪೂರೂಪದ ಕೃತಿ

(A) ಚಾವುಂಡರಾಯಪುರಾಣ

(B) ಮಲ್ಲಿನಾಥಪುರಾಣ

(C) ಬಸವಪುರಾಣ

(D) ವೀರಶೈವಾಮೃತಪುರಾಣ

**3.** ದುರ್ಗಸಿಂಹನಿಗೆ ಆಶ್ರಯಕೊಟ್ಟ ರಾಜ

(A) ಚಾಲುಕ್ಯ ಜಯಸಿಂಹ

(B) ಇರಿವಬೆಡಂಗ

(C) ಮೂರನೇ ಕೃಷ್ಣ

(D) ಒಂದನೇ ಬಲ್ಲಾಳ

**4.** ಸುದ್ದಕನ್ನಡದೊಳ್ ತಂದಿಕ್ಕುವುದೇ ಸಕ್ಕದಮಂ

(A) ಕೇಶಿರಾಜ

(B) ಆಂಡಯ್ಯ

(C) ಮುದ್ದಣ

(D) ನಯಸೇನ

**5.** ಭಟ್ಟನಾರಾಯಣನ 'ವೇಣಿಸಂಹಾರ' ಕೃತಿಯಿಂದ ಪ್ರೇರಣೆಗೊಂಡ ಕನ್ನಡ ಕಾವ್ಯ

(A) ಸಾಹಸ ಭೀಮ ವಿಜಯಂ

(B) ವಿಕ್ರಮಾರ್ಜುನ ವಿಜಯಂ

(C) ವೃಷಭೇಂದ್ರ ವಿಜಯ

(D) ಜಗನ್ನಾಥ ವಿಜಯ

**6.** 'ಚೆನ್ನಕೂಡಲಸಂಗಮದೇವ' ಎಂಬ ಅಂಕಿತ-ದಿಂದ ವಚನ ರಚನೆ ಮಾಡಿದವರು

(A) ಬಸವಣ್ಣ

(B) ಚೆನ್ನಬಸವಣ್ಣ

(C) ಅಂಬಿಗರ ಚೌಡಯ್ಯ

(D) ಮಹಾದೇವಿಯಕ್ಕ

**7.** 'ಅನುಭವಸಾರ' ಕೃತಿಯನ್ನು ರಚಿಸಿದವರು

(A) ನಿಜಗುಣ ಶಿವಯೋಗಿ

(B) ಮುಪ್ಪಿನ ಷಡಕ್ಷರಿ

(C) ಸರ್ವಜ್ಞ

(D) ಭೀಮಕವಿ

**8.** ಲಕ್ಕಣ್ಣ ದಂಡೇಶ ಜೀವಿಸಿದ್ದ ಕಾಲ

(A) ಹದಿನಾಲ್ಕನೆಯ ಶತಮಾನ

(B) ಹದಿನಾರನೆಯ ಶತಮಾನ

(C) ಹದಿನೈದನೆಯ ಶತಮಾನ

(D) ಹದಿಮೂರನೆಯ ಶತಮಾನ



Latest Sarkari Jobs, Govt Exam Results, Vacancies and updates on one click Know More

9. ಅಪರಾಜಿತೇಶ್ವರ ಶತಕವನ್ನು ಬರೆದ ಕವಿ
   (A) ಹರಿಹರ
   (B) ರತ್ನಾಕರ ವರ್ಣಿ
   (C) ಸೋಮೇಶ್ವರ
   (D) ಶಿಶುಮಾಯಣ

10. 'ಶಬ್ದ ಸ್ಮೃತಿ'ಯನ್ನು ಒಳಗೊಂಡ ಕೃತಿ
   (A) ಶಬ್ದಮಣಿದರ್ಪಣಂ
   (B) ಕಾವ್ಯಾವಲೋಕನ
   (C) ಕರ್ನಾಟಕ-ಭಾಷಾಭೂಷಣ
   (D) ಶಬ್ದಾನುಶಾಸನ

11. 'ಒಥೆಲೊ' ನಾಟಕವನ್ನು 'ಶೂರಸೇನ ಚರಿತೆ' ಯೆಂದು ಅನುವಾದಿಸಿದವರು
   (A) ವೈ. ನಾಗೇಶಶಾಸ್ತ್ರಿ
   (B) ಬಸವಪ್ಪಶಾಸ್ತ್ರಿ
   (C) ಶಿವಮೂರ್ತಿಶಾಸ್ತ್ರಿ
   (D) ಎ.ಆರ್. ಕೃಷ್ಣಶಾಸ್ತ್ರಿ

12. ಬಂಕಿಮಚಂದ್ರರ 'ದುರ್ಗೇಶನಂದಿನಿ' ಕಾದಂ-ಬರಿಯನ್ನು ಕನ್ನಡಕ್ಕೆ ಅನುವಾದಿಸಿದವರು
   (A) ಎ.ಆರ್. ಕೃಷ್ಣಶಾಸ್ತ್ರಿ
   (B) ಬಿ. ವೆಂಕಟಾಚಾರ್
   (C) ಎಸ್.ಜಿ. ನರಸಿಂಹಾಚಾರ್
   (D) ಆರ್. ನರಸಿಂಹಾಚಾರ್

13. 'ಇಜ್ಜೋಡು' ಕಾದಂಬರಿಯ ಕರ್ತೃ
   (A) ವಿ. ಕೃ. ಗೋಕಾಕ
   (B) ಅ.ನ.ಕೃ.
   (C) ಕೃಷ್ಣಮೂರ್ತಿ ಪುರಾಣಿಕ
   (D) ತ.ರಾ.ಸು.

14. 'ಕರ್ನಾಟಕ-ಕವಿಚರಿತೆ'–ಕಾರರೆಂದು ಪ್ರಸಿದ್ಧ-ರಾದವರು
   (A) ಎ. ವೆಂಕಟಸುಬ್ಬಯ್ಯ
   (B) ರಂ. ಶ್ರೀ. ಮುಗಳಿ
   (C) ಆರ್. ನರಸಿಂಹಾಚಾರ್
   (D) ತ. ಸು. ಶಾಮರಾವ್

15. 'ಶಿಕಾರಿ' ಕಾದಂಬರಿಯ ಕರ್ತೃ
   (A) ಶಾಂತಿನಾಥ ದೇಸಾಯಿ
   (B) ಗಂಗಾಧರ ಚಿತ್ತಾಲ
   (C) ಎಸ್. ಎಲ್. ಭೈರಪ್ಪ
   (D) ಯಶವಂತ ಚಿತ್ತಾಲ

16. 'ವಕ್ರೋಕ್ತಿಜೀವಿತ' ದ ಕರ್ತೃ
   (A) ಕುಂತಕ
   (B) ಆನಂದವರ್ಧನ
   (C) ವಾಮನ
   (D) ಕ್ಷೇಮೇಂದ್ರ

17. 'Defence of poetry' ಕೃತಿಯ ಕರ್ತೃ
   (A) ಡ್ರೈಡನ್
   (B) ಶೆಲ್ಲಿ
   (C) ಆರ್ನಾಲ್ಡ್
   (D) ಕ್ರೋಚೆ

18. ಸಮಾಜ ಶಾಸ್ತ್ರೀಯ ಚಿಂತನೆಯ ವಿಮರ್ಶಕ
   (A) ಜಾರ್ಜ ಲ್ಯೂಕಾಸ್
   (B) ಎಫ್. ಆರ್. ಲೀವೀಸ್
   (C) ಟಿ.ಎಸ್. ಇಲಿಯಟ್
   (D) ಪ್ಲೇಟೊ



Latest Sarkari Jobs, Govt Exam Results, Vacancies and updates on one click
Know More

19. ಇದು ಪೂರ್ವದ ಹಳಗನ್ನಡ ಹಂತಕ್ಕೆ ಸೇರಿದ ಪದ

(A) ಬೆಟ್ಟದೊಳು

(B) ಬೆಟ್ಟದೊಳ್

(C) ಬೆಟ್ಟದಲಿ

(D) ಬೆಟ್ಟದುಳ್

20. 'ಅರಮನೆ' ಪದವು ಈ ಸಮಾಸವಾಗಿದೆ.

(A) ತತ್ಪುರುಷ ಸಮಾಸ

(B) ಕರ್ಮಧಾರಯ ಸಮಾಸ

(C) ಕ್ರಿಯಾ ಸಮಾಸ

(D) ಗಮಕ ಸಮಾಸ

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು :**

21. ಇವರು ಚಂಪೂ ಕೃತಿಕಾರರು

I. ಪಂಪ ಮತ್ತು ರಾಘವಾಂಕ

II. ಪೊನ್ನ ಮತ್ತು ನಾಗಚಂದ್ರ

III. ರನ್ನ ಮತ್ತು ಚಾವುಂಡರಾಯ

IV. ನೇಮಿಚಂದ್ರ ಮತ್ತು ರುದ್ರಭಟ್ಟ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು III

(B) II ಮತ್ತು IV

(C) I ಮತ್ತು IV

(D) II ಮತ್ತು III

22. ಇವರು ಕೀರ್ತನಕಾರರು

I. ಶ್ರೀಪಾದರಾಜರು ಮತ್ತು ವಾದಿರಾಜರು

II. ವ್ಯಾಸರಾಯರು ಮತ್ತು ಶಿಶುನಾಳ ಷರೀಫರು

III. ತಿರುಮಲಾರ್ಯ ಮತ್ತು ಕನಕದಾಸರು

IV. ಮಹಿಪತಿದಾಸರು ಮತ್ತು ಪುರಂದರ ದಾಸರು.

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು IV

(B) II ಮತ್ತು IV

(C) III ಮತ್ತು IV

(D) II ಮತ್ತು III

23. ಇವರು ನವ್ಯಕವಿಗಳು

I. ಬಿ.ಎಂ. ಶ್ರೀ ಮತ್ತು ರಾಮಚಂದ್ರ ಶರ್ಮ

II. ಗೋಪಾಲಕೃಷ್ಣ ಅಡಿಗ ಮತ್ತು ಎ.ಕೆ. ರಾಮಾನುಜನ್

III. ಪುತಿನ ಮತ್ತು ಕೆ.ಎಸ್. ನರಸಿಂಹಸ್ವಾಮಿ

IV. ಲಂಕೇಶ ಮತ್ತು ಕೆ.ವಿ. ತಿರುಮಲೇಶ

ಇವುಗಳಲ್ಲಿ ಸರಿಯಾದ ಉತ್ತರ :

(A) II ಮತ್ತು IV

(B) I ಮತ್ತು II

(C) III ಮತ್ತು IV

(D) I ಮತ್ತು IV



Latest Sarkari Jobs, Govt Exam Results, Vacancies and updates on one click
Know More

24. ಇವು ಶ್ರೀರಂಗರ ನಾಟಕಗಳು

I. ಶೋಕಚಕ್ರ ಮತ್ತು ಕತ್ತಲೆಬೆಳಕು

II. ಸಂಜೀವಿನಿ ಸಾವಿತ್ರಿ ಮತ್ತು ದರಿದ್ರ ನಾರಾಯಣ

III. ಹರಿಜನ್ವಾರ ಮತ್ತು ಟೊಳ್ಳುಗಟ್ಟಿ

IV. ಶೋಕಚಕ್ರ ಮತ್ತು ಕೀಚಕ

ಇವುಗಳಲ್ಲಿ ಸರಿಯಾದ ಉತ್ತರ :

(A) III ಮತ್ತು IV

(B) I ಮತ್ತು III

(C) II ಮತ್ತು IV

(D) I ಮತ್ತು II

25. ಇವು ಕುರ್ತಕೋಟಿ ಅವರ ವಿಮರ್ಶಾ ಕೃತಿಗಳು

I. ಸಾಹಿತ್ಯ ಮತ್ತು ಯುಗಧರ್ಮ ಹಾಗೂ ಉರಿಯ ನಾಲಿಗೆ

II. ಭೃಂಗದ ಬೆನ್ನೇರಿ ಮತ್ತು ಜಿಜ್ಞಾಸೆ

III. ಭೃಂಗದ ಬೆನ್ನೇರಿ ಮತ್ತು ನವ್ಯಕಾವ್ಯ ಪ್ರಯೋಗ

IV. ಬಾರೋ ಸಾಧನಕೇರಿಗೆ ಮತ್ತು ಕನ್ನಡ-ನಾಟಕ ವಿಮರ್ಶೆ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು II

(B) II ಮತ್ತು III

(C) I ಮತ್ತು III

(D) II ಮತ್ತು IV

26. ಇವು ಕುಂ. ವೀರಭದ್ರಪ್ಪನವರ ಕೃತಿಗಳು

I. ಅರಮನೆ ಮತ್ತು ಶಾಮಣ್ಣ

II. ಯಾಪಿಲ್ಲು ಮತ್ತು ಕುಸುಮ ಬಾಲೆ

III. ಭಗವತಿ ಕಾಡು ಮತ್ತು ಕಾಡು ಕುದುರೆ

IV. ಭಗವತಿ ಕಾಡು ಮತ್ತು ಡೋಮ ಮತ್ತು ಇತರ ಕಥೆಗಳು

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು II (B) I ಮತ್ತು IV

(C) II ಮತ್ತು III (D) III ಮತ್ತು IV

27. ಇವರು ಪ್ರಾಚೀನ ಆಲಂಕಾರಿಕರು

I. ಭರತ ಮತ್ತು ಆನಂದವರ್ಧನ

II. ರಾಜಶೇಖರ ಮತ್ತು ದಂಡಿ

III. ವಾಮನ ಮತ್ತು ಭಾಮಹ

IV. ಮಮ್ಮಟ ಮತ್ತು ಹೇಮಚಂದ್ರ

ಇವುಗಳಲ್ಲಿ ಸರಿಯಾದ ಉತ್ತರ :

(A) II ಮತ್ತು III (B) I ಮತ್ತು II

(C) III ಮತ್ತು IV (D) I ಮತ್ತು IV

28. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

I. ಮಾರ್ಕ್ಸ್‌ವಾದಿ ವಿಮರ್ಶೆ - ಕೋಲರಿಜ್

II. ಸ್ತ್ರೀವಾದಿ ವಿಮರ್ಶೆ - ಟಿ.ಎಸ್. ಇಲಿಯಟ್

III. ಚಾರಿತ್ರಿಕವಿಮರ್ಶೆ - ಜಾರ್ಜ್‌ಲ್ಯೂಕಾಸ್

IV. ಪ್ರಾಯೋಗಿಕ ವಿಮರ್ಶೆ - ಆಯ್.ಎ. ರಿಚರ್ಡ್ಸ್

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು II (B) II ಮತ್ತು III

(C) I ಮತ್ತು IV (D) III ಮತ್ತು IV



Latest Sarkari Jobs, Govt Exam Results, Vacancies and updates on one click
Know More

**29.** ಇವು ತೃತೀಯಾ ವಿಭಕ್ತಿ ಪ್ರತ್ಯಯಗಳು

I. ಇಂ ಮತ್ತು ಇನ್.

II. ಒಳ್ ಮತ್ತು ಅಲ್ಲಿ.

III. ಇಂದಂ ಮತ್ತು ಎ.

IV. ಕೆ ಮತ್ತು ಗೆ.

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು III

(B) I ಮತ್ತು II

(C) III ಮತ್ತು IV

(D) II ಮತ್ತು III

**30.** ಇವು ಅನ್ಯ ದೇಶೀಯ ಪದಗಳು

I. ಜವಾಬು II. ಆಸ್ಪತ್ರೆ

III. ಮನೆ IV. ನೇಗಿಲು

ಇವುಗಳಲ್ಲಿ ಸರಿಯಾದ ಉತ್ತರ :

(A) II ಮತ್ತು III (B) I ಮತ್ತು II

(C) I ಮತ್ತು III (D) I ಮತ್ತು IV

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ.**

ಈ ಕೆಳಗಿನ ಲೇಖನ ಭಾಗವನ್ನು ಓದಿ ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿರಿ. ಉತ್ತರದ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿರಿ.

ಹೊಸ ಕಾವ್ಯದ ಅರ್ಥಮಾಡಿಕೊಳ್ಳಬೇಕಾದರೆ ಈ ಹೊಸ ವ್ಯಕ್ತಿತ್ವದ ಮತ್ತು ಅದರ ವಿವಿಧ ಸಾಧ್ಯತೆಗಳ ಅರ್ಥಮಾಡಿಕೊಳ್ಳಬೇಕು. ಇಂಗ್ಲಿಷ್ ಸಾಹಿತ್ಯದಲ್ಲಿ ವರ್ಡ್ಸ್‌ವರ್ಥ್, ಕೋಲರಿಜ್, ಶೆಲೆ, ಕೀಟ್ಸ್ ಈ ಮುಂತಾದ ಹಲವರಲ್ಲಿ ಇದರ ಜೀವನಾಡಿಯಿರುತ್ತದೆ. ಕನ್ನಡ ಕವಿಗಳು ಅಂಧಾನು-ಕರಣ ಮಾಡದೆ ಇದರಿಂದ ಸ್ಫೂರ್ತಿಪಡೆದಿದ್ದಾರೆ, ಇವರ ಉತ್ತಮ ಕೃತಿಗಳಿಂದ ಪ್ರಭಾವಿತರಾಗಿದ್ದಾರೆ. ಜೊತೆಗೆ ಕಾರ್ಲಾಯಿಲ್, ಎಮರ್ಸನ್, ಮೋರ್ಲೆ, ಮಿಲ್ ಮುಂತಾದ ವಿಚಾರವಂತರಿಂದ ವಿಚಾರ ಧನವನ್ನು ಸಂಗ್ರಹಿಸಿದ್ದಾರೆ. ಷೇಕ್ಸಪಿಯರ್, ಇಬ್ಸೆನ್ ಇವರ ನಾಟಕಗಳಿಂದ ರೋಮಾಂಚಿತರಾಗಿದ್ದಾರೆ. ಇಂದಿನ ಕವಿವ್ಯಕ್ತಿಗೆ ಅಪೂರ್ಣವಾದ, ಆದರೂ ವಿಶಾಲವಾದ, ವಿಕಾಸಶೀಲವಾದ ವ್ಯಕ್ತಿತ್ವವು ಒದಗಿ ಬಂದಿದೆ. ತನಗೆ ದೊರೆತ ಸ್ವಾತಂತ್ರ್ಯವನ್ನು ಸರಿಯಾಗಿ ಬಳಸಿದರೆ ಅವನ ಎತ್ತರ, ಆಳ, ಅಗಲಗಳು ದಿಮ್ಮಿರಿದು ಹೆಚ್ಚಾಗಬಹುದು. ಹೊಸ ಕಾವ್ಯದಲ್ಲಿ ಪ್ರಚುರವಾಗಿರುವ ಭಾವಗೀತೆ ಅಂದರೆ lyric ಎಂಬ ಕಾವ್ಯಪ್ರಕಾರವು ಪಾಶ್ಚಾತ್ಯ ಪ್ರಭಾವದಿಂದ ಎಂದು ಹೇಳುವುದುಂಟು. 'ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿದೇಶಮಂ' ಎಂಬ ಪಂಪನ ಉತ್ಕಟಉಕ್ತಿಯಿಂದ ಮೊದಲಾಗಿ, 'ಪುರುಷನ ಒಲವಿಲ್ಲದ ಲಲನೆಯಂತಾದೆನಯ್ಯ' ಎಂಬ ಶರಣವಾಣಿಯಲ್ಲಿಯೂ 'ಅಂತರಂಗದ ಕದವು ತೆರೆಯಿತಿಂದು' ಎಂಬ ದಾಸರ ಉದ್ಗಾರದಲ್ಲಿಯೂ ಭಾವಗೀತಾತ್ಮಕವಾದ ಅಭಿವ್ಯಕ್ತಿಯಿದೆ. ಆದರೆ ಇಂದಿನ ಭಾವಗೀತೆ ಇಂದಿನ ಕವಿಯ ವಿಶಿಷ್ಟ ವ್ಯಕ್ತಿತ್ವದ ಮೂಲಕ ತನ್ನ ಆಶಯ ಮತ್ತು ರೀತಿಗಳಲ್ಲಿ ಬೇರೆ ಕಳೆ ತಾಳಿದೆ. ಈ ದೃಷ್ಟಿಯಿಂದ ಭಾವಗೀತೆಯ ನವೀನ ಸ್ವರೂಪಕ್ಕೆ ಪಾಶ್ಚಾತ್ಯ ಪ್ರಭಾವವು ಪ್ರಮುಖ ಪ್ರೇರಕವೆನ್ನಲು ಅಡ್ಡಿಯಿಲ್ಲ. ಇಂದಿನ ಭಾವಗೀತೆಯ ಮುಖ್ಯ ಲಕ್ಷಣಗಳಿವು : 1 ತಾನೇ ತಾನಾಗಿ ಬದುಕಿ ಬೆಳೆಯುತ್ತಿರುವ ಕವಿವ್ಯಕ್ತಿತ್ವದ ಸಹಜಸ್ಫೂರ್ತ ಉದ್ಗಾರವಾಗಿ ಅದು ಬರಬೇಕು. 2. ಅದರ ಆಶಯದಲ್ಲಿ ಪ್ರಾಮಾಣಿಕ ಸ್ವಾನುಭವವಿರಬೇಕು. 3. ಅದಕ್ಕೆ ವಿಷಯದ ಆಯ್ಕೆ ಅಥವಾ ನಿರೂಪಣ ರೀತಿಯಲ್ಲಿ ಪೂರ್ವನಿಯೋಜಿತವಾದ ಯಾವುದೇ ನಿಯಮ ನಿರ್ಬಂಧಗಳಿರಬಾರದು. 4. ತನ್ನ



Latest Sarkari Jobs, Govt Exam Results, Vacancies and updates on one click
Know More

ರಸಾನುಭವಕ್ಕೆ ಅನುಗುಣವಾದ ಛಂದಸ್ಸು, ಲಯ, ಗತಿ, ಶೈಲಿಗಳನ್ನು ಕವಿ ಸ್ವಂತ ಪ್ರತಿಭೆಯಿಂದ ಯೋಜಿಸಿಕೊಳ್ಳಬೇಕು. ಒಂದರ್ಥದಲ್ಲಿ ಇದು ಕವಿ ಜೀವಕ್ಕೆ ದೊರೆತ ಉಚ್ಚ ಪ್ರತಿಯ ಅಥವಾ ಮೇಲಣ ಪ್ರಕೃತಿಯ ಸ್ವಾತಂತ್ರ್ಯ (Freedom of a higher order or in the higher nature). ಈ ಸ್ವಾತಂತ್ರ್ಯದ ಸದುಪಯೋಗದಲ್ಲಿ, 'ನಿಯತಿಕೃತ-ನಿಯಮರಹಿತ'ವಾದರೂ ಸ್ವನಿಯಮಗಳ ನಿರ್ಮಿತಿ--ಯಲ್ಲಿ ಹೊಸ ಕವಿಯ ಸಾಫಲ್ಯವಿದೆ, ಹೊಸ ಕಾವ್ಯದ ಸಾರ್ಥಕ್ಯವಿದೆ. Romantic Poetry ಅಥವಾ ಸ್ವಚ್ಛಂದ ಕಾವ್ಯ ಎಂಬುದರ ರಹಸ್ಯವೇ ಇದು.

ಭಾವಗೀತೆ ರೊಮ್ಯಾಂಟಿಕ್ ಕಾವ್ಯದ ಅಭಿವ್ಯಕ್ತಿ ಸಾಧನ. ಇದಕ್ಕೆ ಪ್ರತಿಯಾಗಿರುವ Classical Poetry ಅಂದರೆ ಮಾರ್ಗ ಇಲ್ಲವೆ ಸುಬದ್ಧಕಾವ್ಯ. ಇದರ ಅಭಿವ್ಯಕ್ತಿಗೆ ಪರಂಪರಾಗತವಾದ ಆಶಯ, ಛಂದಸ್ಸು, ಶೈಲಿಗಳು ಅವಶ್ಯ, ಅವುಗಳ ಪರಿಮಿತಿಯಲ್ಲಿಯೆ ಕವಿಪ್ರತಿಭೆ ಬೆಳಗಬೇಕು. ರೋಮ್ಯಾಂಟಿಕ್ ಕಾವ್ಯದ ಜೀವಾಳವು ಕಳೆದ ನಾಲ್ವತ್ತು ವರ್ಷಗಳಿಂದಲೂ ಕನ್ನಡ ಕಾವ್ಯದಲ್ಲಿ ಹೊಸ ಹೊಸ ನಾಮರೂಪಗಳಲ್ಲಿ ಕಂಡುಬಂದಿದೆ. ಇಂಗ್ಲಿಷ್ ಕಾವ್ಯದಲ್ಲಿ ಬಳಕೆಯಾಗಿರುವ Sonnet, Ode, Elegy, Ballad, Satire, Parody ಮುಂತಾದ ಕಾವ್ಯರೂಪಗಳೂ Blank verse, Free verse ಮುಂತಾದ ಛಂದೋರೂಪಗಳೂ ಕನ್ನಡ ಕವಿತಾ ಪ್ರಪಂಚದಲ್ಲಿ ಇಂದಿನವರೆಗೆ ವಿಪುಲವಾಗಿವೆ ಮಾತ್ರವಲ್ಲ, ಹಲವು ಕೃತಿಗಳಲ್ಲಿ ಪರಿಪಕ್ವವಾಗಿ ತೋರಿರುತ್ತವೆ.

ಹೊಸ ಕವಿಗಳ ಜ್ಞಾನ ಬೆಳೆದಂತೆ ಅನುಭವ ಹೆಚ್ಚಿದಂತೆ ಹೊಸ ಕಾವ್ಯದ 'ವಿಷಯ'ಕ್ಕೆ ವೈವಿಧ್ಯ ಬಂದಿದೆ, ಆಶಯಕ್ಕೆ ನಾವೀನ್ಯವುಂಟಾಗಿದೆ. ಉದಾಹರಣೆಗೆ ವಿನಾಯಕರ ಸಮುದ್ರ ಗೀತೆಗಳನ್ನು ನೋಡಬೇಕು. ಹಿಂದೆ ಸಾಂಪ್ರದಾಯಿಕವಾಗಿ ಕವಿಗಳು ಸಮುದ್ರವನ್ನು ಬಣ್ಣಿಸಿದರು. ಇಂದಿನ ಕವಿ ತನ್ನ ಸಮುದ್ರ ಸಂಚಾರದಲ್ಲಿ ಕಂಡುಂಡ ವಿವಿಧ ರಸಾನುಭವಗಳನ್ನು ಬಣ್ಣಿಸಿದ್ದಾನೆ. ಅನೇಕ ದೇಶಗಳ ಸೃಷ್ಟಿ ಸೌಂದರ್ಯ, ಜನಜೀವನ ಅವನ ಕಾವ್ಯ ವಿಷಯವಾಗಿದೆ. ಪಾಶ್ಚಾತ್ಯ ಸಂಪರ್ಕದಿಂದ ಕನ್ನಡ ಕಾವ್ಯಕ್ಕೆ ಈ ಹೊಸತನ ಬಂದಿದೆ. ಬಿಡಿಯಾದ ಭಾವಗೀತಗಳಲ್ಲಿ ಮಾತ್ರವಲ್ಲ, ಇಡಿಯಾದ ದೀರ್ಘ ಕವನದಲ್ಲಿಯೂ ಆಗಿರುವ ಪಾಶ್ಚಾತ್ಯ ಪ್ರಭಾವಕ್ಕೆ ಗೋವಿಂದ ಪೈಗಳ 'ಗೊಲ್ಗೊಥಾ' ಉತ್ತಮ ಉದಾಹರಣೆಯೆನ್ನಬಹುದು. ಕ್ರೈಸ್ತನನ್ನು ಸಿಲುಬೆಗೇ--ರಿಸಿದ ಸಂದರ್ಭವನ್ನು ಈ ಕೃತಿಯಲ್ಲಿ ಅತ್ಯಂತ ಕಲ್ಪಕತೆಯಿಂದ ನಿರೂಪಿಸಲಾಗಿದೆ.

ಹೊಸ ಕನ್ನಡ ಕಾವ್ಯದ ಚರಿತ್ರೆಯಲ್ಲಿ ನವ್ಯಕಾವ್ಯ ಎಂಬ ಪ್ರಕಾರವೊಂದು ಕಳೆದ ಕೆಲವು ವರ್ಷಗಳಿಂದ ರೂಢವಾಗತೊಡಗಿದೆ. ವಿನಾಯಕರ ನವ್ಯಕವಿತೆ, 'ಉಗಮ'ಗಳಲ್ಲಿ ಅದು ಉಗಮಹೊಂದಿ ಅಡಿಗರ ಚಂಡೆಮದ್ದಳೆ, ಭೂಮಿಗೀತಗಳಲ್ಲಿ ಪ್ರಚಂಡ ಸ್ವರೂಪ ತಾಳಿದೆ. ಹಲವು ಹೊಸ ಕವಿಗಳು ಅದಕ್ಕೆ ಮಾರುಹೋಗಿದ್ದಾರೆ. ಟಿ. ಎಸ್. ಇಲಿಯಟ್ ಮುಂತಾದ ಪಾಶ್ಚಾತ್ಯ ಕವಿಗಳ ಕೃತಿಗಳಿಂದ ಈ ಕಾವ್ಯ ಪ್ರಕಾರಕ್ಕೆ ಸ್ಫೂರ್ತಿ ದೊರೆತಿದೆ. ರೊಮ್ಯಾಂಟಿಕ್ ಕಾವ್ಯದ ಕಾಲ ಮುಗಿದು ನವ್ಯ ಕಾವ್ಯದ ಕಾಲ ಪ್ರಾರಂಭವಾಯಿತೆಂಬ ಕೂಗು ಸಹ ಎದ್ದಿದೆ. ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ ಎಂಬ ಗಾದೆಮಾತಿನ ಸರಣಿಯಲ್ಲಿ ವಾದಮಾಡುವವರು ಮಾಡಬಹುದು. ನಮ್ಮ ದೃಷ್ಟಿಯಲ್ಲಿ ನವ್ಯಕಾವ್ಯದ ಒಳ್ಳೆಯ ನಿದರ್ಶನಗಳಲ್ಲಿ ಸ್ವಾಗತಾರ್ಹವಾದ ಜೀವನಾಭಿಮುಖವಾದ ವಾಸ್ತವಪ್ರಜ್ಞೆಯಿದೆ, ನೂತನ



Latest Sarkari Jobs, Govt Exam Results, Vacancies and updates on one click
Know More

ಪ್ರತೀಕಗಳ, ಸಾರ್ಥಕ ಪದಗಳ, ಸ್ವತಂತ್ರ ಸೂಕ್ಷ್ಮಲಯಗಳ ಸಂಪತ್ತಿಯಿದೆ. ಆದರೆ ನವ್ಯ ಕಾವ್ಯವು ತಾನು ಬೇರೆ ಎಂಬ ಪಂಥವಾಗಬಾರದು. ಅಸ್ಪಷ್ಟತೆ ಮತ್ತು ದುರ್ಬೋಧತೆಗಳು ತನ್ನ ವೈಶಿಷ್ಟ್ಯವೆಂದು ಮೆರೆಯಬಾರದು. ರೋಮ್ಯಾಂಟಿಕ್ ಕಾವ್ಯದೊಡನೆ ತಾನು ಪ್ರತಿಸ್ಪರ್ಧಿಯೆಂಬ ಅಭಿನಿವೇಶವನ್ನು ಬಿಡಬೇಕು. ಹಾಗೆ ನೋಡಿದರೆ ಈ ಮೊದಲು ನಾವು ಹೇಳಿದಂತೆ ರೋಮ್ಯಾಂಟಿಕ್ ಕಾವ್ಯದ ಮೂಲಸೂತ್ರಗಳಿಗೆ ಅನುಸರಿಸಿಯೆ ನವ್ಯಕಾವ್ಯವು ಬೇರೊಂದು ಬಗೆಯ ವ್ಯಕ್ತಿತ್ವದ ಅಭಿವ್ಯಕ್ತಿಯಾಗಲು ಹಾತೊರೆಯುತ್ತದೆ. ಎರಡ-ರಲ್ಲಿಯೂ ಗುಣವಿದೆ, ದೋಷವಿದೆ. ರೋಮ್ಯಾಂಟಿಕ್ ಕಾವ್ಯದ ಕೆಲ ಭಾಗದಲ್ಲಿ ಜೀವನವಿಮುಖವಾದ ಭಾವನಾತಿರೇಕ ತೋರಿದರೆ ಅದಕ್ಕೆ ಪ್ರತಿಕ್ರಿಯೆಯಾಗಿ ಜೀವನ ಸಂಮುಖವಾದ ವಾಸ್ತವಪ್ರಜ್ಞೆ ಇನ್ನೊಂದು ಭಾಗದಲ್ಲಿ ತೋರಬಹುದು. ಅದು ಪ್ರತೀಕನಿಷ್ಠ, ಮುಕ್ತಛಂದೋಬದ್ಧವಾದಾಗ ನವ್ಯಕಾವ್ಯವೆನಿಸುತ್ತದೆ. ನವ್ಯಕಾವ್ಯದಲ್ಲಿಯೂ ವಿಕ್ಷಿಪ್ತತೆ, ಅಶ್ಲೀಲತೆ, ಅನ್ಯಭಾಷೆಯ ಅವತರಣಿಕೆಗಳ ಹವ್ಯಾಸ ಇವು ಅತಿರೇಕಕ್ಕೆ ಹೋದಾಗ ಅದಕ್ಕೆ ಪ್ರತಿಕ್ರಿಯೆಯಾಗಿ ನವ್ಯತರವಾದ ಕಾವ್ಯವು ಮುಂದೆ ಹುಟ್ಟಬಹುದು. ಮುಖ್ಯವಾಗಿ ಹೊಸ ಕಾವ್ಯ ಜೀವಂತವಾದ ಮತ್ತು ವಿಕಾಸಶೀಲವಾದ ವ್ಯಕ್ತಿತ್ವದ ಪ್ರಾಮಾಣಿಕವಾಣಿ-ಯಾಗಬೇಕು. ಪಾಶ್ಚಾತ್ಯ ಕಾವ್ಯದ ಪ್ರಭಾವ ಮುಖ್ಯತಃ ಈ ಜೀವನಶ್ರದ್ಧೆಯಲ್ಲಿ ಆಗಿದೆ. ಕಾವ್ಯ ಪ್ರಕಾರ, ಶೈಲಿ, ಛಂದಸ್ಸು ಇವೆಲ್ಲದರಲ್ಲಿ ಆಗಿರುವ ಪ್ರಭಾವಕ್ಕೆ ಇದು ಮೂಲ. ಈ ಮೂಲಕ್ಕೆ ಮೂಲವಾದದ್ದು ಅಂತಃ-ಪ್ರೇರಣೆ. ಬರೀ ಪ್ರಭಾವದಿಂದ ಯಾವ ಕಾವ್ಯವೂ ಹುಟ್ಟಲಾರದು, ಬೆಳೆಯಲಾರದು.

**31.** ಈ ಲೇಖನ ಭಾಗದಲ್ಲಿ ಲೇಖಕರ ಪ್ರಧಾನ ಆಶಯ

(A) ಆಧುನಿಕ ಕನ್ನಡ ಕಾವ್ಯ ಪ್ರಕಾರಗಳ ಮೇಲೆ ಪಾಶ್ಚಾತ್ಯ ಪ್ರಭಾವ.

(B) ಭಾವಗೀತೆಯ ಮುಖ್ಯ ಲಕ್ಷಣಗಳ ಪರಾಮರ್ಶೆ.

(C) ನವ್ಯ ಕಾವ್ಯ ಸ್ವರೂಪ ಚಿಂತನೆ.

(D) ನವ್ಯೋತ್ತರ ಕಾವ್ಯ ಸಮೀಕ್ಷೆ.

**32.** ಭಾವಗೀತೆಯನ್ನು ರಚಿಸಲು

(A) ನವ್ಯಕಾವ್ಯ ಪ್ರಕಾರವನ್ನು ದ್ವೇಷಿಸ-ಬೇಕು.

(B) ಛಂದಸ್ಸು ಶೈಲಿ ಲಯ ಗತಿಗಳನ್ನು ಸ್ವಂತವಾಗಿ ರೂಪಿಸಿಕೊಳ್ಳುವ ಪ್ರತಿಭೆ ಇರಬೇಕು.

(C) ಆಕರ್ಷಕವಾಗಿ ಹಾಡುವ ಶಕ್ತಿ ಇರ-ಬೇಕು.

(D) ತನ್ನದೆಂಬ ವಿಶಿಷ್ಟ ಅನುಭವವಿರಬೇಕು.

ಇವುಗಳಲ್ಲಿ ಸರಿಯಾದ ಉತ್ತರ.

(A) I ಮತ್ತು II

(B) II ಮತ್ತು III

(C) II ಮತ್ತು IV

(D) III ಮತ್ತು IV

**33.** ಹೊಸ ಕಾವ್ಯದ ವಸ್ತುವಿನಲ್ಲಿ

(A) ಪ್ರಾಚೀನ ವಿಚಾರಧಾರೆ ಉಂಟು.

(B) ವೈವಿಧ್ಯವಿದೆ.

(C) ಕೇವಲ ಶೃಂಗಾರವಿದೆ.

(D) ಯಾವುದೇ ಹೊಸತನವಿಲ್ಲ.



Latest Sarkari Jobs, Govt Exam Results, Vacancies and updates on one click
Know More

**34.** ಹೊಸಗನ್ನಡದಲ್ಲಿ ನವ್ಯಕಾವ್ಯರಚನೆಗೆ ಸ್ಫೂರ್ತಿ ಉಂಟಾದುದು

I. ವಿ.ಕೃ. ಗೋಕಾಕ ಅವರಿಂದ.

II. ಕುವೆಂಪು ಅವರಿಂದ.

III. ಟಿ.ಎಸ್. ಇಲಿಯಟ್‌ನಿಂದ.

IV. ವರ್ಡ್ಸ್‌ವರ್ತನಿಂದ.

ಇವುಗಳಲ್ಲಿ ಸರಿಯಾದ ಉತ್ತರ.

(A) I ಮತ್ತು II

(B) III ಮತ್ತು IV

(C) II ಮತ್ತು IV

(D) I ಮತ್ತು III

**35.** ಕಾವ್ಯ ಹುಟ್ಟಿ ಬೆಳೆಯಲು

(A) ಪ್ರಭಾವ ಕಾರಣ.

(B) ಅಂತರಂಗದ ಸ್ಫೂರ್ತಿಯೇ ಕಾರಣ.

(C) ಪ್ರಾಮಾಣಿಕತೆಯೇ ಕಾರಣ.

(D) ಓದುವ ಹವ್ಯಾಸವೇ ಕಾರಣ.

**ಹೇಳಿಕೆ - ವಿವರಣೆ ಆಧಾರಿತ ಬಹು ಆಯ್ಕೆ ಮಾದರಿ.**

**36.** **ಹೇಳಿಕೆ** : ಗುಹೇಶ್ವರಾ, ನಾನು ಕಲ್ಲಾದರೆ ನೀನೇನಪ್ಪೆ.

**ವಿವರಣೆ** : ಗುಹೇಶ್ವರ ನೀನು ಕಲ್ಲಾದರೆ ನಾನೂ ಕಲ್ಲೇ.

ಇವುಗಳಲ್ಲಿ ಸರಿಯಾದ ಉತ್ತರ

(A) ಹೇಳಿಕೆ ಸರಿ ವಿವರಣೆ ತಪ್ಪು.

(B) ಹೇಳಿಕೆ ತಪ್ಪು ವಿವರಣೆ ಸರಿ.

(C) ಹೇಳಿಕೆ ತಪ್ಪು ವಿವರಣೆ ತಪ್ಪು.

(D) ಹೇಳಿಕೆ ಸರಿ ವಿವರಣೆ ಸರಿ.

**37.** **ಹೇಳಿಕೆ** : "ಸಿಂಹಾವಲೋಕನ ಕ್ರಮದಿ ನಱುಪಿದಂ ಕವಿರತ್ನಂ".

**ವಿವರಣೆ** : ಹಿನ್ನೋಟದ ಕ್ರಮದಿಂದ ಕವಿರತ್ನ (ಭಾರತದ ಕಥೆಯನ್ನು) ನಿರೂಪಿಸಿದ್ದಾನೆ.

ಇವುಗಳಲ್ಲಿ ಸರಿಯಾದ ಉತ್ತರ

(A) ಹೇಳಿಕೆ ಸರಿ ವಿವರಣೆ ತಪ್ಪು.

(B) ಹೇಳಿಕೆ ಸರಿ ವಿವರಣೆ ಸರಿ.

(C) ಹೇಳಿಕೆ ತಪ್ಪು ವಿವರಣೆ ಸರಿ.

(D) ಹೇಳಿಕೆ ತಪ್ಪು ವಿವರಣೆ ತಪ್ಪು.

**38.** **ಹೇಳಿಕೆ** : ಪುರದ ಪುಣ್ಯಂ ಪುರುಷರೂಪಿಂದೆ ಪೋಗುತಿದೆ.

**ವಿವರಣೆ** : ಇಡೀ ನಗರದ ಜನರ ಪುಣ್ಯವೇ ಪುರುಷರೂಪದಲ್ಲಿದೆ.

ಇವುಗಳಲ್ಲಿ ಸರಿಯಾದ ಉತ್ತರ

(A) ಹೇಳಿಕೆ ಸರಿ ವಿವರಣೆ ಸರಿ.

(B) ಹೇಳಿಕೆ ತಪ್ಪು ವಿವರಣೆ ಸರಿ.

(C) ಹೇಳಿಕೆ ಸರಿ ವಿವರಣೆ ತಪ್ಪು.

(D) ಹೇಳಿಕೆ ತಪ್ಪು ವಿವರಣೆ ತಪ್ಪು.

**39.** **ಹೇಳಿಕೆ** : ಸ್ತ್ರೀ ರೂಪಮೆ ರೂಪಂ ಶೃಂಗಾರಮೆ ರಸಂ.

**ವಿವರಣೆ** : ರೂಪವೆಂದರೆ ಸ್ತ್ರೀಯರದ್ದೇ ರಸವೆಂದರೆ ಶೃಂಗಾರವೇ.

ಇವುಗಳಲ್ಲಿ ಸರಿಯಾದ ಉತ್ತರ

(A) ಹೇಳಿಕೆ ಸರಿ ವಿವರಣೆ ಸರಿ.

(B) ಹೇಳಿಕೆ ತಪ್ಪು ವಿವರಣೆ ತಪ್ಪು.

(C) ಹೇಳಿಕೆ ಸರಿ ವಿವರಣೆ ತಪ್ಪು.

(D) ಹೇಳಿಕೆ ತಪ್ಪು ವಿವರಣೆ ಸರಿ.



Latest Sarkari Jobs, Govt Exam Results, Vacancies and updates on one click
Know More

40. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ರಾವ ಬಹಾದ್ದೂರ – ಗ್ರಾಮಾಯಣ

(B) ಅನಕೃ – ದುರ್ಗಾಸ್ತಮಾನ

(C) ಲಂಕೇಶ – ಶಿಕಾರಿ

(D) ಯಶವಂತ ಚಿತ್ತಾಲ – ಇಜ್ಜೋಡು

41. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(A) ಭೂಮಿಗೀತ – ವಿ.ಕೃ. ಗೋಕಾಕ

(B) ಗಾಂಧಿ ಬಜಾರ – ನಿಸಾರ ಅಹಮದ್

(C) ನವರಾತ್ರಿ – ಶ್ರೀನಿವಾಸ

(D) ರಕ್ತಾಕ್ಷಿ – ಕುವೆಂಪು

42. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(A) ಜಗನ್ನಾಥ – ರಸಗಂಗಾಧರ

(B) ಭರತ – ನಾಟ್ಯಶಾಸ್ತ್ರ

(C) ಆನಂದರ್ಧನ – ಧ್ವನ್ಯಾಲೋಕ

(D) ದಂಡಿ – ದಶರೂಪಕ

43. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ಅಸ್ತಿತ್ವವಾದ – ಕೇಟ ಮಿಲೆಟ್

(B) ಸ್ತ್ರೀವಾದ – ಎಫ್.ಆರ್. ಲೀವೀಸ್

(C) ಮಾರ್ಕ್ಸ್‌ವಾದ – ಲೂಯಿ ಅಲ್ತುಸೆ

(D) ರೂಪನಿಷ್ಠವಾದ – ಎಡ್ವರ್ಡ ಸಯೀದ್

44. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ಬೆಟ್ಟದಿಂದ – ದ್ವಿತೀಯ

(B) ಬೆಟ್ಟದಲ್ಲಿ – ಸಪ್ತಮಿ

(C) ಬೆಟ್ಟದ – ಪಂಚಮಿ

(D) ಬೆಟ್ಟಕ್ಕೆ – ಪ್ರಥಮ

45. ಬಹು ಆಯ್ಕೆಯ ಜೋಡಣೆ

| | | | |
|---|---|---|---|
| (A) | ನಾಗಚಂದ್ರ | (i) | ಕಬ್ಬಿಗರ ಕಾವ |
| (B) | ಬ್ರಹ್ಮಶಿವ | (ii) | ವಸ್ತುಕೋಶ |
| (C) | ಆಂಡಯ್ಯ | (iii) | ರಾಮಚಂದ್ರ ಚರಿತಪುರಾಣ |
| (D) | ಜನ್ನ | (iv) | ಸಮಯಪರೀಕ್ಷೆ |
| | | (v) | ಯಶೋಧರ ಚರಿತೆ |

ಇವುಗಳಲ್ಲಿ ಸರಿಯಾದ ಉತ್ತರ

| | (a) | (b) | (c) | (d) |
|---|---|---|---|---|
| (A) | (i) | (iii) | (ii) | (iv) |
| (B) | (ii) | (iii) | (i) | (iv) |
| (C) | (iii) | (iv) | (i) | (v) |
| (D) | (ii) | (iii) | (iv) | (i) |



Latest Sarkari Jobs, Govt Exam Results, Vacancies and updates on one click
Know More

**46.** ಬಹು ಆಯ್ಕೆಯ ಜೋಡಣೆ.

| | | | |
|---|---|---|---|
| (A) | ತಿರುಮಲಾಂಬಾ | (i) | ಬದುಕು |
| (B) | ತ್ರಿವೇಣಿ | (ii) | ಸತೀ ಹಿತೈಷಿಣಿ |
| (C) | ಗೀತಾ ನಾಗ-ಭೂಷಣ | (iii) | ಸೋತುಗೆದ್ದವಳು |
| (D) | ಕೊಡಗಿನ ಗೌರಮ್ಮ | (iv) | ಫಣಿಯಮ್ಮ |
| | | (v) | ಕಂಬನಿ |

ಇವುಗಳಲ್ಲಿ ಸರಿಯಾದ ಉತ್ತರ

| | (a) | (b) | (c) | (d) |
|---|---|---|---|---|
| (A) | (ii) | (iii) | (iv) | (i) |
| (B) | (i) | (ii) | (iii) | (v) |
| (C) | (iv) | (iii) | (i) | (ii) |
| (D) | (ii) | (iii) | (i) | (v) |

**47.** ಬಹು ಆಯ್ಕೆಯ ಜೋಡಣೆ.

| | | | |
|---|---|---|---|
| (A) | ಕೊಲರಿಜ್ | (i) | ದಿ ಗ್ರೇಟ ಟ್ರೆಡಿಶನ್ |
| (B) | ಎಫ್.ಆರ್. ಲೀವೀಸ್ | (ii) | ಬಯಾಗ್ರಫಿಯಾ ಲಿಟರರಿಯಾ |
| (C) | ಆಯ್.ಎ. ರಿಚರ್ಡ್ಸ್ | (iii) | ಥ್ರೀ ಪೆನ್ನಿ ಒಪೇರಾ |
| (D) | ಬ್ರೆಕ್ಟ | (iv) | ಫಿಲಾಸಫಿ ಆಫ್ ಲಿಟರೇಚರ್ |
| | | (v) | ಡಿಫೆನ್ಸ್ ಆಫ್ ಪೊಯಿಟ್ರಿ |

ಇವುಗಳಲ್ಲಿ ಸರಿಯಾದ ಉತ್ತರ

| | (a) | (b) | (c) | (d) |
|---|---|---|---|---|
| (A) | (ii) | (i) | (iv) | (iii) |
| (B) | (i) | (ii) | (iii) | (iv) |
| (C) | (ii) | (iii) | (iv) | (v) |
| (D) | (v) | (i) | (ii) | (iv) |

**ಅನುಕ್ರಮ ಮಾದರಿ : ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮಣಿಕೆಯನ್ನು ಗುರುತಿಸಿರಿ.**

**48.** (A) ಇಂಗ್ಲಿಷ ಗೀತೆಗಳು, ಅಬಚೂರಿನ ಪೋಸ್ಟ್ ಆಫೀಸು, ರಾಮಾಶ್ವಮೇಧ, ಮರಳಿಮಣ್ಣಿಗೆ.

(B) ಮರಳಿಮಣ್ಣಿಗೆ, ರಾಮಾಶ್ವಮೇಧ, ಅಬಚೂರಿನ ಪೋಸ್ಟ್ ಆಫೀಸು, ಇಂಗ್ಲಿಷ ಗೀತೆಗಳು.

(C) ರಾಮಾಶ್ವಮೇಧ, ಇಂಗ್ಲಿಷ ಗೀತೆಗಳು, ಮರಳಿಮಣ್ಣಿಗೆ, ಅಬಚೂರಿನ ಪೋಸ್ಟ್ ಆಫೀಸು.

(D) ಅಬಚೂರಿನ ಪೋಸ್ಟ್ ಆಫೀಸು, ಇಂಗ್ಲಿಷ ಗೀತೆಗಳು, ಮರಳಿಮಣ್ಣಿಗೆ, ರಾಮಾಶ್ವ-ಮೇಧ.

**49.** (A) ದುರ್ಗಸಿಂಹ, ಹೊನ್ನಮ್ಮ, ನಾಗ-ವರ್ಮ, ನಂಜುಂಡ.

(B) ದುರ್ಗಸಿಂಹ, ನಾಗವರ್ಮ, ನಂಜುಂಡ, ಹೊನ್ನಮ್ಮ.

(C) ನಂಜುಂಡ, ದುರ್ಗಸಿಂಹ, ನಾಗ-ವರ್ಮ, ಹೊನ್ನಮ್ಮ.

(D) ಹೊನ್ನಮ್ಮ, ದುರ್ಗಸಿಂಹ, ನಾಗ-ವರ್ಮ, ನಂಜುಂಡ.

**50.** (A) ಮಿರ್ಜಿ ಅಣ್ಣಾರಾಯ, ಗಳಗನಾಥ, ಯು. ಆರ್. ಅನಂತಮೂರ್ತಿ, ಬಿ. ವೆಂಕಟಾಚಾರ್ಯ.

(B) ಗಳಗನಾಥ, ಮಿರ್ಜಿ ಅಣ್ಣಾರಾಯ, ಯು. ಆರ್. ಅನಂತಮೂರ್ತಿ, ಬಿ. ವೆಂಕಟಾಚಾರ್ಯ.

(C) ಯು. ಆರ್. ಅನಂತಮೂರ್ತಿ, ಮಿರ್ಜಿ ಅಣ್ಣಾರಾಯ, ಗಳಗನಾಥ, ಬಿ. ವೆಂಕಟಾಚಾರ್ಯ.

(D) ಬಿ. ವೆಂಕಟಾಚಾರ್ಯ, ಗಳಗನಾಥ, ಮಿರ್ಜಿ ಅಣ್ಣಾರಾಯ, ಯು. ಆರ್. ಅನಂತಮೂರ್ತಿ.



Latest Sarkari Jobs, Govt Exam Results, Vacancies and updates on one click
Know More

Prepp

# Latest Sarkari jobs, Govt Exam alerts, Results and Vacancies

- Latest News and Notification
- Exam Paper Analysis
- Topic-wise weightage
- Previous Year Papers with Answer Key
- Preparation Strategy & Subject-wise Books

To know more **Click Here**

www.prepp.in